**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 805/2021**

| | | | |
|---|---|---|---|
| **ಹೆಸರು** | : | **ಗೌರಮ್ಮ** | **ದೋ.ಸಾ. 3** |
| **ಗಂಡನ ಹೆಸರು** | : | **ಭೀಮಾಶಂಕರ** | **ಪ್ರಾ.ಸಾ. 3** |
| **ವಯಸ್ಸು** | : | **30 ವರ್ಷ** | **ದಿನಾಂಕಃ 10-04-2023** |
| **ಉದ್ಯೋಗ** | : | **ಕೂಲಿ ಕೆಲಸ** | |
| **ವಾಸಸ್ಥಳ** | : | **ಕುಪನೂರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು, ಆರೋಪಿಗೆ ನಾನು ಸುಲೆಪೇಟ ಗ್ರಾಮದಲ್ಲಿ ನೋಡಿದ್ದೆ. ಪ್ರಾಸಾ-1,2 ನನಗೆ ಗೊತ್ತು. ಚಾಸಾ-4,5,8 ರವರು ನನಗೆ ಗೊತ್ತು. ಮೃತ ನಾಗಪ್ಪ ನನಗೆ ಗೊತ್ತು.

ಸುಮಾರು ಎರಡು ವರ್ಷಗಳ ಹಿಂದೆ ಆಟೋದಲ್ಲಿ ಪ್ರಾಸಾ-2 ರವರ ಆಟೋದಲ್ಲಿ 10-15 ಮಂದಿ ಸುಲೆಪೇಟ ಸಂತೆಯಿಂದ ಕುಪನೂರಕ್ಕೆ ಹೊರಟಿದ್ದೇವು. ಸುಲೆಪೇಟದಲ್ಲಿ ತೋಟದ ಹತ್ತಿರ ಯಾರೋ ಬಂದು ಡಿಕ್ಕಿಪಡಿಸಿದ ಕಾರಣ ನಮ್ಮ ಆಟೋ ಪಲ್ಟಿಯಾಗಿ ಬಿದ್ದಿತ್ತು. ಆದ್ದರಿಂದ ನಾನು ಪ್ರಜ್ಞೆ ತಪ್ಪಿ ಬಿದ್ದಿದ್ಧೆ. ಸದರಿ ಆಟೋ ನನ್ನ ಎಡಗೈ ಮೇಲೆ ಬಿದ್ದಿದ ಕಾರಣ ವೈದ್ಯರು ನನ್ನ ಎಡಗೈಯಲ್ಲಿ ರಾಡನ್ನು ಅಳವಡಿಸಿದ್ದಾರೆ. ಘಟನೆಯ ಕಾರಣ ನನ್ನ ಬಲಗಾಲು ಹಾಗೂ ನನ್ನ ಎಡಗೈಗೆ ತರಚಿದ ಗಾಯ ಆಗಿತ್ತು. ನಾಗಪ್ಪನಿಗೆ ಎದೆಯ ಮೇಲೆ ಹಾಗೂ ತಲೆಗೆ ಗಾಯಗಳಾಗಿದ್ದವು. ಸುಲೆಪೇಟದಿಂದ ಹೊರಟಾಗ ಮಧ್ಯಾಹ್ನ 2 ರಿಂದ 2.30 ಗಂಟೆ ಆಗಿತ್ತು. ಹಾಗೂ ಘಟನೆ ನಡೆದಾಗ ಮಧ್ಯಾಹ್ನ 2.30 ಗಂಟೆ ಆಗಿತ್ತು. ಘಟನೆಯಾದ ಮೇಲೆ ನನಗೆ ಹಾಗೂ ನಾಗಪ್ಪನಿಗೆ ಬಸವೇಶ್ವರ ಆಸ್ಪತ್ರೆ ಕಲಬುರಗಿಗೆ ಕರೆದುಕೊಂಡು ಹೋದರು. ಘಟನೆ ನಡೆದ ದಿನದಂದೆ ಸಂಜೆ 7.00 ಗಂಟೆ ಸುಮಾರಿಗೆ ನಾಗಪ್ಪ ಮೃತಪಟ್ಟಿದ್ದ.

ನನ್ನ ಜೊತೆ ಬಂದ 10-15 ಜನರಲ್ಲಿ ಚಾಸಾ-4 ಮತ್ತು 5 ರವರು ಸಹ ಇದ್ದರು. ನಾವು ಕುಳಿತಿರುವ ಆಟೋ ನಿಪಿ-3 ರ ಭಾವಚಿತ್ರದಲ್ಲಿದೆ. ಅಪಘಾತ ಆಗಿರುವ ಬಗ್ಗೆ ನಾನು ಪೊಲೀಸರಿಗೆ ಹೇಳಿದ್ದೇನೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲು ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಅಪಘಾತ ನಡೆದಾಗ ದಿನಾಂಕಃ 09-10-2020 ಆಗಿತ್ತು ಎಂದರೆ ಸರಿ. ನಾವು ಹೊರಟಿರುವ ಆಟೋ ಸಂಖ್ಯೆ KA 32 C 0733 ಇತ್ತು ಎಂದರೆ ಸರಿ. ನಾವು ಸುಲೆಪೇಟದಿಂದ ಕುಪನೂರಗೆ ಬರುತ್ತಿರುವಾಗ ಎದುರುಗಡೆಯಿಂದ ಒಂದು ಆಟೋ ಬಂದಿತ್ತು ಎಂದರೆ ಸರಿ. ಸದರಿ ಆಟೋ ಸಂಃ KA 32 D 7361 ಇತ್ತು ಎಂದರೆ ನನಗೆ ಗೊತ್ತಿಲ್ಲ. ಎದುರುಗಡೆಯಿಂದ ಆಟೋ ಅತೀವೇಗ ಮತ್ತು ನಿಷ್ಕಾಳಜಿತನದಿಂದ ಬಂದಿತ್ತು ಎಂದರೆ ಸರಿ. ಆದ್ದರಿಂದ ಎದುರುಗಡೆಯಿಂದ ಆಟೋ ಡಿಕ್ಕಿ ಪಡಿಸಿ ನಮ್ಮ ಆಟೋ ಪಲ್ಟಿಯಾಗಿ ಬಿತ್ತು ಎಂದರೆ ಸರಿ. ನಾಗಪ್ಪನಿಗೆ ಭಾರಿ ರಕ್ತಗಾಯ ಆಗಿದ್ದರಿಂದ ನಾಗಪ್ಪ ಈತನ ಎಡಭಾಗದ ತಲೆಯ ಮೇಲೆ, ಎಡಭಾಗದ ಕಣ್ಣಿನ ಸಮೀಪ, ಎದೆಯ ಮೇಲೆ ಭಾರಿ ಗುಪ್ತಗಾಯ ಮತ್ತು ಎಡಪಕ್ಕೆಯ ಮೇಲೆ ಗುಪ್ತ ಗಾಯ ಹಾಗೂ ಎಡಗೈ ಮೇಲೆ ತರಚಿದ ಭಾರಿ ರಕ್ತಗಾಯವಾಗಿತ್ತು ಎಂದರೆ ಸರಿ. ನನ್ನ ಜೊತೆ ಇರುವ ಚಾಸಾ-4 ಮತ್ತು 5 ರವರು ಸಹ ಬಿದಿದ್ದರು ಆದರೆ ಅವರಿಗೆ ಯಾವದೆ ಗಾಯಗಳು ಆಗಿರಲ್ಲಿ ಎಂದರೆ ಸರಿ. ಪ್ರಾಸಾ-2 ರವರು ನಮಗೆ ಒಂದು ಖಾಸಗಿ ವಾಹನ ಮಾಡಿಕೊಂಡು ಉಪಚಾರ ಕುರಿತು ಜಿಲ್ಲಾ ಸರಕಾರಿ ಆಸ್ಪತ್ರೆ ಕಲಬುರಗಿಗೆ ಕರೆದುಕೊಂಡು ಸೇರಿಕೆ ಮಾಡುವಷ್ಟರಲ್ಲಿ ನಾಗಪ್ಪ ಮೃತಪಟ್ಟಿದ್ದ ಎಂದರೆ ಸರಿ.

ದಿನಾಂಕಃ 25-10-2020 ರಂದು ನಾನು ಪೊಲೀಸ ಠಾಣೆಗೆ ಹೋದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ತೋರಿಸಿ ಇವನೆ ಅಪಘಾತಪಡಿಸಿದ್ದ ಎಂದು ಹೇಳಿದ್ದರು ಎಂದರೆ ಸರಿ. ಸದರಿ ಅಪಘಾತ ಆರೋಪಿಯ ತಿಪ್ಪಿನಿಂದ ಆಗಿದೆ ಎಂದರೆ ಸರಿ. ದಿನಾಂಕಃ 10-10-2020 ರಂದು ಸನರೈಸ ಆಸ್ಪತ್ರೆ ಕಲಬುರಗಿಯಲ್ಲಿ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ.**